# ಕರ್ನಾಟಕದ ಏಕೀಕರಣಕ್ಕೆ ಸ್ಫೂರ್ತಿಯಾದ ವಿಜಯನಗರ ಸಾಮ್ರಾಜ್ಯ

ವಿಜಯಲಕ್ಷ್ಮಿ
ಸಹಾಯಕ ಪ್ರಾಧ್ಯಾಪಕರು, ಇತಿಹಾಸ ವಿಭಾಗ, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಕೊಪ್ಪಳ.

DOI: https://doi.org/10.5281/zenodo.18009060

## ABSTRACT:

19 ಮತ್ತು 20ನೇ ಶತಮಾನದ ಆದಿಭಾಗದಲ್ಲಿನ ವಸಾಹತುಶಾಹಿ ಆಡಳಿತದಿಂದ ಹರಿದು ಹಂಚಿಹೋಗಿರುವ ಕನ್ನಡ ನಾಡನ್ನು ಒಂದಾಗಿಸುವ ಉದ್ದೇಶದಿಂದ ವಸಾಹತುಶಾಹಿಗಳ ವಿರುದ್ಧವಾಗಿ ಕನ್ನಡಿಗರಲ್ಲಿ ಜಾಗೃತಿಯನ್ನು ಉಂಟು ಮಾಡುವುದು. ಮತ್ತು 14ನೇ ಶತಮಾನದಲ್ಲಿ ಉದಯವಾದ ವಿಜಯನಗರ ಸಾಮ್ರಾಜ್ಯದ ವೈಭವ ಮತ್ತು ಚಾರಿತ್ರಿಕ ನೆನಪುಗಳ ಮೂಲಕ ಕನ್ನಡಿಗರು ತಮ್ಮ ಅಸ್ಮಿತೆಯನ್ನು ಕಟ್ಟಿಕೊಳ್ಳಲು ಆ ಅವಧಿಯಲ್ಲಿ ರಚನೆಯಾದ ಸಾಹಿತ್ಯವು ಹೇಗೆ ಪ್ರೇರೇಪಿಸಿತು ಎಂಬುದನ್ನು ತಿಳಿಸುವ ಉದ್ದೇಶ ಹೊಂದಿದೆ. 'ಕೇಳುತಿದೆ ಕಲ್ಲು ಕಲ್ಲಿನಲಿ ಕನ್ನಡ ನುಡಿ ಕಾಣುತಿದೆ ಹೊನ್ನಚರಿತೆಯಲಿ ಹಂಪೆಯ ಗುಡಿ ವೈಭವದ ತವರು ಕೂಗಿದೆ ಪ್ರೀತಿಸುವ ಹೃದಯ ಬೇಡಿದೆ ಕೇಳು ನೀನು' ಎಂದು ವಿಜಯನಗರ ಸಾಮ್ರಾಜ್ಯವನ್ನು ಕುರಿತು ಸಾಹಿತಿ ಡಾ.ದೊಡ್ಡರಂಗೇಗೌಡರು ಬರೆದ ಕವಿತೆಯ ಸಾಲುಗಳು ಹಂಪೆಯ ಶಿಲ್ಪಗಳಲ್ಲಿ ಕನ್ನಡದ ಅಸ್ಮಿತೆಯನ್ನು ಕಾಣುವ ಮತ್ತು ಕನ್ನಡ ಭಾಷೆಯ ಶ್ರೀಮಂತಿಕೆಯನ್ನು ಈ ಸಾಮ್ರಾಜ್ಯದ ಜೊತೆಗೆ ತೋರುವಂತೆ ತಮ್ಮ ಕವಿತೆಯ ಮೂಲಕ ಕನ್ನಡ ಸಾಹಿತ್ಯಕ್ಕೆ ಜೀವ ತುಂಬಿದ್ದಾರೆ. ಇಂತಹ ಕನ್ನಡ ಕವಿಗಳ ಜಾಗೃತಿ ಸಂದೇಶವನ್ನು ಪರಿಚಯಿಸುವುದೇ ಈ ಲೇಖನದ ಮೂಲ ಉದ್ದೇಶ.

## KEYWORDS:

ವಿಜಯನಗರ ಸಾಮ್ರಾಜ್ಯ, ಅಸ್ಮಿತೆ, ಭುವನೇಶ್ವರಿ, ಏಕೀಕರಣ, ವೈಭವ, ವಸಾಹತುಶಾಹಿ.

**ಪ್ರಸ್ತಾವನೆ:**

ಶ್ರೀಮಂತ ಮತ್ತು ವೈಭವಯುತವಾಗಿ ಮೆರೆದ ಹಿಂದೂ ಸಾಮ್ರಾಜ್ಯ ವಿಜಯನಗರವು ಆ ಕಾಲದಲ್ಲಿ ಭಾರತದಲ್ಲಿ ಅಷ್ಟೇ ಅಲ್ಲದೇ ಏಷ್ಯಾದಲ್ಲಿಯೇ ಶ್ರೀಮಂತವಾಗಿತ್ತು ಎಂಬುದನ್ನು ದಾಖಲೆಗಳು ಪುಷ್ಟೀಕರಿಸುತ್ತವೆ. ದಕ್ಷಿಣ ಭಾರತದಲ್ಲಿ ಮುಸಲ್ಮಾನರ ಆಡಳಿತ ಮತ್ತು ಸಂಸ್ಕೃತಿಯನ್ನು ತಡೆಯಲು ಹುಟ್ಟಿಕೊಂಡ ಈ ಸಾಮ್ರಾಜ್ಯ ಕನ್ನಡ ಮತ್ತು ಕನ್ನಡಿಗರ ಧೀಮಂತಿಕೆಯೂ ಹೌದು. ಇಲ್ಲಿ ಕನ್ನಡ, ತೆಲುಗು, ತಮಿಳು, ಸಂಸ್ಕೃತ ಭಾಷೆಗಳಿಗೆ ಸಮಾನ ಪ್ರೋತ್ಸಾಹವಿದ್ದರೂ, ಕನ್ನಡ ಭಾಷೆಗೆ ವಿಶೇಷ ಗೌರವ ದೊರಕಿತು. ಈ ಸಾಮ್ರಾಜ್ಯದ ಆಡಳಿತ ಭಾಷೆ ಕನ್ನಡವಾಗಿತ್ತು ಎಂಬುದಕ್ಕೆ ಕನ್ನಡ ಭಾಷೆಯಲ್ಲಿ ಸಿಕ್ಕ ಅತೀ ಹೆಚ್ಚು ಶಾಸನಗಳೇ ಸಾಕ್ಷಿ. ಜೊತೆಗೆ ಕನ್ನಡಕ್ಕೆ ರಾಜರಿಂದ ನೇರ ಆಶ್ರಯ, ಕವಿಗಳಿಗೆ, ದಾಸರುಗಳಿಗೆ, ಜನರ ಭಾಷೆಗೆ ಮನ್ನಣೆ ನೀಡಿದ್ದೂ ಕಂಡುಬರುತ್ತದೆ. ಸಾಮ್ರಾಜ್ಯದ ಆರಂಭ ಮತ್ತು ವಿಶ್ವಖ್ಯಾತಿ ಪಡೆದ ಹಂಪಿ ಪ್ರದೇಶವು ಕನ್ನಡದ ಮಣ್ಣಿನ ನೆಲಗಳಾಗಿದ್ದವು. ಕನ್ನಡಿಗರ ಅಧಿದೇವತೆ, ನಾಡದೇವತೆ ಅಂತ ಕರೆಸಿಕೊಳ್ಳುವ ಭುವನೇಶ್ವರಿ ಈ ಸಾಮ್ರಾಜ್ಯದ ಕುಲದೇವತೆ. 'ಕನ್ನಡ ರಾಜ್ಯ ರಮಾ ರಮಣ' ಎಂದು ಕರೆಸಿಕೊಳ್ಳುವ ಅರಸ ಕೃಷ್ಣದೇವರಾಯ ಈ ಸಾಮ್ರಾಜ್ಯದ ಪ್ರಸಿದ್ಧ ದೊರೆ. 'ಕರ್ನಾಟಕ ಸಿಂಹಾಸನ ಸ್ಥಾಪನಾಚಾರ್ಯ' ಎಂದು ಮಧುರ ಚೆನ್ನರ ಮೂಲಕ ಕರೆಸಿಕೊಳ್ಳುವ ವಿದ್ಯಾರಣ್ಯರು ಈ ಸಾಮ್ರಾಜ್ಯದ ಸ್ಥಾಪಕರು. ರಗಳೆಯ ಕವಿ ಹರಿಹರ, ಷಟ್ಪದಿಯ ಬ್ರಹ್ಮ ರಾಘವಾಂಕ, ಕುಮಾರವ್ಯಾಸರು, ಕನ್ನಡದ ದಾಸ ಶ್ರೇಷ್ಠರಾದ ಪುರಂದರದಾಸರು,

ಕನಕದಾಸರು, ಈ ಕಾಲದವರೇ. ಇವರೆಲ್ಲ ಬರೆದ ಕನ್ನಡ ಸಾಹಿತ್ಯ ಅತ್ಯಂತ ಶ್ರೀಮಂತವಾದದ್ದು. ಇಂತಹ ಬೃಹತ್ ಸಾಮ್ರಾಜ್ಯ ವೈಭವಯುತವಾಗಿ ಆಳಿ, ಕಲೆ, ವಾಸ್ತುಶಿಲ್ಪ, ಸಾಹಿತ್ಯ, ಮತ್ತು ಸಂಸ್ಕೃತಿಗೆ ವಿಶೇಷ ಮೆರಗು ತಂದಿದ್ದು ಈ ಸಾಮ್ರಾಜ್ಯದ ಹೆಗ್ಗಳಿಕೆ. ಕ್ರಿ.ಶ 1565 ರಲ್ಲಿ ನಡೆದ ರಕ್ಕಸ–ತಂಗಡಗಿ ಯುದ್ಧದಲ್ಲಿ ಶಾಹಿ ಸುಲ್ತಾನರ ಕೈಯಲ್ಲಿ ಸೋತು ಅವನತಿಯನ್ನು ಹೊಂದಿತು. ಪ್ರಪಂಚದಲ್ಲಿ ಸಾಮ್ರಾಜ್ಯದ ಹುಟ್ಟು ಮತ್ತು ಅವನತಿ ಸಹಜ ಪ್ರಕ್ರಿಯೆಯಾದರೂ, ವಿಜಯನಗರ ಸಾಮ್ರಾಜ್ಯದ ಅವನತಿಯು ಕನ್ನಡಿಗರ ಹೃದಯಕ್ಕೆ ಇರಿದಂತಾಗಿತ್ತು. ಕನ್ನಡದ ಶೌರ್ಯ, ಕರಾವಳಿ–ಮಲೆನಾಡು–ಬಯಲುಸೀಮೆಯ ಸಂಸ್ಕೃತಿ, ಸ್ಥಳೀಯ ನೈಸರ್ಗಿಕ ಸೌಂದರ್ಯ ಕುರಿತು ಸಾಹಿತಿಗಳು ವಿಜಯನಗರ ಸಾಮ್ರಾಜ್ಯವನ್ನು ಇಟ್ಟುಕೊಂಡು ಬರೆದಿದ್ದು ಕನ್ನಡಿಗರಿಗೆ ನಾವೆಲ್ಲಾ ಒಂದೇ ನಾಡಿನ ಮಕ್ಕಳು ಎಂಬ ಭಾವನೆ ಬೆಳೆದು ಏಕೀಕರಣದ ಬಗ್ಗೆ ಜಾಗೃತಿ ಮೂಡಿಸಿತು. ಭಾಷೆ ಮತ್ತು ಸಂಸ್ಕೃತಿಯಲ್ಲಿ ಶ್ರೀಮಂತವಾಗಿದ್ದ ಸಾಮ್ರಾಜ್ಯದ ಕೊಡುಗೆ ಏಕೀಕರಣದ ಸಂದರ್ಭದಲ್ಲಿ ಹೋರಾಟಗಾರರಿಗೆ ಗಟ್ಟಿಯಾದ ಮಾನಸಿಕ ಬಲವನ್ನು ಒದಗಿಸಿತು. ಮುಂದೆ ಇದೇ ಚಳುವಳಿಯ ಸ್ವರೂಪ ಪಡೆಯಿತು. ವಸಾಹತುಶಾಹಿ ಬ್ರಿಟಿಷರ ಕಾಲದಲ್ಲಿ ವಿವಿಧ ಸಂಸ್ಥಾನ ಮತ್ತು ಪ್ರಾಂತ್ಯಗಳಲ್ಲಿ ಹರಿದು ಹಂಚಿ ಹೋಗಿದ್ದ ಕನ್ನಡ ಪ್ರದೇಶಗಳ ಜನರನ್ನು ಜಾಗೃತಗೊಳಿಸಲು ಮತ್ತು ಏಕೀಕರಣಕ್ಕಾಗಿ ಬಡಿದೆಬ್ಬಿಸಲು ವಿಜಯನಗರ ಸಾಮ್ರಾಜ್ಯದ ವೈಭೋಗ, ಇತಿಹಾಸ ಮತ್ತು ಸಂಸ್ಕೃತಿಯನ್ನು ಪ್ರೇರಣೆಯಾಗಿ ತೆಗೆದುಕೊಂಡು ನಾಡನ್ನು ಕಟ್ಟಲು ಹಲವು ಕವಿಗಳು ಹೆಗಲುಕೊಟ್ಟು ನಿಂತರು. ಏಕೀಕರಣದ ಸಂದರ್ಭದಲ್ಲಿ ವಿಜಯನಗರ ಸಾಮ್ರಾಜ್ಯವನ್ನು ಕೇಂದ್ರವಾಗಿಟ್ಟುಕೊಂಡು ಹಲವು ಕೃತಿಗಳು, ಕಾದಂಬರಿಗಳು, ಕವನಗಳು, ನಾಟಕಗಳು ರಚನೆಯಾಗಿ ಕನ್ನಡ ಭಾಷೆಯನ್ನು ಮಾತನಾಡುವ ಜನರನ್ನು ಒಂದೆಡೆ ಏಕೀಕರಣಗೊಳ್ಳಲು ಪ್ರೇರಣೆ ಮೂಡಿಸಿದವು. ಈ ಚಾರಿತ್ರಿಕ ಸಾಮ್ರಾಜ್ಯದ ವೈಭವದ ಬಗ್ಗೆ ಅಭಿಮಾನ ಮೂಡುವಂತೆ ಮಾಡಿದವು. ಕನ್ನಡಮ್ಮ ಭುವನೇಶ್ವರಿ ಈ ಸಾಮ್ರಾಜ್ಯದ ಕುಲದೇವತೆ ಅವಳನ್ನು ಇಂದು ನಾವು ಒಂದು ಕಡೆ ನೆಲೆಗೊಳಿಸಿಲ್ಲ, ಬನ್ನಿ ಕನ್ನಡಮ್ಮನ ಮಕ್ಕಳೇ ಒಂದಾಗಿ ಎಂದು ತಮ್ಮ ಸಾಹಿತ್ಯದ ಮೂಲಕ ಕರೆ ನೀಡಿದರು. ಅಂತಹ ಕೃತಿ, ಕವನ ಕಾದಂಬರಿಗಳು ಈ ರೀತಿ ಇವೆ.

ಆಲೂರು ವೆಂಕಟರಾಯರು – ಕರ್ನಾಟಕ ಗತವೈಭವ : ಕನ್ನಡ ಏಕೀಕರಣ ಚಳುವಳಿಯ ಪ್ರೇರಕ ಶಕ್ತಿಯಾದ ವೆಂಕಟರಾಯರು ಕ್ರಿ.ಶ 1907 ರಲ್ಲಿ ಕನ್ನಡವೆಂಬುದು ಎಲ್ಲಿದೆ ಎಲ್ಲ ಹರಿದು ಹಂಚಿ ಹೋಗಿದೆ, ವೈಭವಯುತವಾಗಿ ಆಳಿದ ಕದಂಬ, ಗಂಗ, ಚಾಲುಕ್ಯ, ಹೊಯ್ಸಳ, ವಿಜಯನಗರದಂತಹ ಸಾಮ್ರಾಜ್ಯಗಳು ಆಳಿದಂತಹ ಈ ನಾಡಿನಲ್ಲಿ ಇಂದು ಅನೈಕ್ಯತೆಯ ಬೀಡಾಗಿದೆ, ಎಲ್ಲರೂ ಜಾಗೃತರಾಗಿ ಎಂದು ಜನರನ್ನು ಎಚ್ಚರಿಸಿದರು. ಹಂಪೆಯ ವೈಭವ ಕೃತಿಯ ಮೂಲಕ ಮತ್ತು ಆ ಸಾಮ್ರಾಜ್ಯವು ಕೊಟ್ಟಂತಹ ಕೊಡುಗೆಗಳು, ಸಂಸ್ಕೃತಿಯನ್ನು ಪುನರುಚ್ಚರಿಸಿದರು. ಹರಿದು ಹಂಚಿ ಹೋಗಿರುವ ಕನ್ನಡದ ಪ್ರಾಂತ್ಯಗಳೆಲ್ಲ ಒಂದಾಗಬೇಕು ಅದಕ್ಕಾಗಿ ನಾವು ವೈಭವಯುತವಾಗಿ ಆಳಿದಂತಹ ವಿಜಯನಗರ ಸಾಮ್ರಾಜ್ಯವನ್ನು ಪ್ರೇರಣೆಯಾಗಿ ತೆಗೆದುಕೊಳ್ಳಬೇಕೆಂದು ಕರೆನೀಡಿದರು. ಕನ್ನಡ ನಾಡಿನ ಇತಿಹಾಸದ ಮೂಲಕ ಸ್ವಗೌರವ ಹುಟ್ಟಿಸಿದರು. ನಾಡು ಭಾಷೆಗೆ ಏಕತೆಯ ಬುನಾದಿ ಹಾಕಿದರು. ಏಕೀಕರಣದ ಚಿಂತನೆಗೆ ಬೌದ್ಧಿಕ ನಾಯಕತ್ವ ವಹಿಸುವುದರ ಮೂಲಕ ಮಾದರಿಯಾದರು.

**ಗಳಗನಾಥರು:**

ಕುಮುದಿನಿ–1913 : ಈ ಕಾದಂಬರಿಯ ಮೂಲಕ ವಿಜಯನಗರ ಸಾಮ್ರಾಜ್ಯದ ನಾಶ ಮತ್ತು 1565ರ ರಕ್ಕಸ–ತಂಗಡಗಿ ಯುದ್ಧದ ನಂತರ ಹಂಪಿಯಿಂದ ರಾಜಧಾನಿ ಬದಲಾವಣೆ,

ಪೆನುಗೊಂಡದಲ್ಲಿ ಸಿಂಹಾಸನಕ್ಕಾಗಿ ನಡೆಯುವ ಅಂತಃಕಲಹಗಳು, ಆ ಸಂದರ್ಭದಲ್ಲಿ ಕನ್ನಡದ ಸಿಂಹಾಸನದ ರಕ್ಷಣೆಗಾಗಿ ಎಚ್ಚಮನಾಯಕ ತೋರಿದ ಶೌರ್ಯ ಮತ್ತು ಸಾಹಸಗಳು ಹಾಗೂ ಕುಮುದಿನಿಯ ತ್ಯಾಗವನ್ನು ಕುರಿತು ಕನ್ನಡಿಗರಲ್ಲಿ ಒಂದಾಗಲು ಪ್ರೇರೇಪಿಸುತ್ತಾರೆ. (ಆನೆ ಅಂತ ವಿಜಯನಗರ ಬಾಲದಂತ ಚಂದ್ರಗಿರಿ). ವೆಂಕಟಪತಿ ಮರಣದ ನಂತರ ಬಾಯಮ್ಮ ಮತ್ತು ಜಗರಾಯ ನಡೆಸಿದ ಕುತಂತ್ರ (ಬ್ರಾಹ್ಮಣ ಮಗು) ಇದರಿಂದ ಕ್ರೋಧಗೊಂಡ ಎಚ್ಚಮನಾಯಕ ಅನ್ಯ ಜಾತಿಯವರನ್ನು ಪರಮ ಪವಿತ್ರವಾದಂತಹ ಸಿಂಹಾಸನಕ್ಕೆ ಕೂಡಿಸುವುದಕ್ಕೆ ಅವಕಾಶ ಕೊಡದೆ ಚಿಕ್ಕರಾಯನ ಮಗನಿಗೆ ಪಟ್ಟ ಕಟ್ಟಿದ. ಸಾಮ್ರಾಜ್ಯ ನಿಷ್ಠ ಎಚ್ಚಮ ಶೌರ್ಯ ಮತ್ತು ಸಾಹಸಗಳು ಮುಂದೆ ವಸಾಹತುಶಾಹಿಗಳ ವಿರುದ್ಧ ಹೋರಾಡಲು ಪ್ರೇರೇಪಣೆ ಮತ್ತು ಜಾಗೃತಿಯನ್ನು ಮೂಡಿಸಿತು ಎಂಬುದು ಇವರ ಚಿಂತನೆಗಳಿಂದ ಗೊತ್ತಾಗುತ್ತದೆ. ಈ ಕುಮುದಿನಿ ಕಾದಂಬರಿಯ ಮೂಲಕ ಗಳಗನಾಥರು ಕನ್ನಡ ನಾಡಿನ ಜನರು ಕನ್ನಡದ ಏಕೀಕರಣ ಮತ್ತು ದೇಶದ ಸ್ವಾತಂತ್ರ್ಯದ ಪರವಾಗಿ ನಿಲ್ಲಲು ವಿಜಯನಗರ ಸಾಮ್ರಾಜ್ಯದ ಅವನತಿಯನ್ನು ಬಳಸಿಕೊಂಡಿದ್ದಾರೆ. ಜೊತೆಗೆ ಈ ಕಾದಂಬರಿ ವಿಜಯನಗರದಿಂದ ಸಂಪತ್ತು ಚಂದ್ರಗಿರಿಗೆ ಸ್ಥಳಾಂತರಿಸಲ್ಪಟ್ಟು ಅಲ್ಲಿ ಅದರ ಆಸೆಗೆ ಜಗರಾಯನಂತಹ ತಮಿಳು ರಾಜದ್ರೋಹಿಗಳನ್ನು ಮೆಟ್ಟಿ ನಿಲ್ಲುವ ಮತ್ತು ಕನ್ನಡಿಗರ ಕೆಚ್ಚೆದೆಯನ್ನು ತೋರಿಸುವ ಅನನ್ಯತೆಯನ್ನು ಹಾಗೂ ಕನ್ನಡದ ಏಕೀಕರಣಕ್ಕೆ ಪ್ರೇರಣೆಯನ್ನು ಈ ಕಾದಂಬರಿಯ ಮೂಲಕ ಎತ್ತಿ ಹಿಡಿದಿದ್ದಾರೆ.

**ಮಾಧವ ಕರುಣಾ ವಿಳಾಸ 1923:** ರಾಷ್ಟ್ರವನ್ನು ಸ್ವತಂತ್ರಗೊಳಿಸುವ ಮತ್ತು ಪರತಂತ್ರ ಮುಕ್ತಗೊಳಿಸುವ ಸಲುವಾಗಿ ಜನರನ್ನು ಜಾಗೃತಗೊಳಿಸಲು ಈ ಕಾದಂಬರಿ ಪ್ರೇರಣೆ ನೀಡುತ್ತದೆ. ಈ ಕಾದಂಬರಿ ಬಗ್ಗೆ ಅನೇಕ ವಿಮರ್ಶಕರು ಬರೆದಿದ್ದು ಇತಿಹಾಸಕ್ಕಿಂತ ಕಲ್ಪನೆಗೆ ಜಾಸ್ತಿ ಒತ್ತು ನೀಡಿದ್ದಾರೆ. ಆದರೂ ಕೂಡ ಈ ಕಾದಂಬರಿಯು ಕೆಲವು ವಿಷಯಗಳನ್ನು ರಾಷ್ಟ್ರೀಯ ಹಿನ್ನೆಲೆಯಲ್ಲಿ ಆಗಿನ ಕಾಲಘಟ್ಟದಲ್ಲಿ ಜಾಗೃತಿಗೆ ಕಾರಣವಾಗಲು ಪ್ರೇರಣೆ ನೀಡುತ್ತದೆ. ನಾಡಿನ ಪುನರುತ್ಥಾನ, ಕರ್ನಾಟಕ ಜಾಗೃತಿ, ಧಾರ್ಮಿಕ ಸಂವಿಧಾನವನ್ನು ವಿಚಲಿತಗೊಳಿಸದೆ ಎಲ್ಲರೂ ಒಗ್ಗಟ್ಟಿನಿಂದ ಹೋರಾಡುವುದಕ್ಕೆ ಈ ಕೃತಿಯು ಪ್ರೇರಣೆ ನೀಡುತ್ತದೆ. ವೈದಿಕ ಧರ್ಮದ ಚೌಕಟ್ಟಿನಲ್ಲಿ ಈ ಕಾದಂಬರಿಯು ನಾಡಿನ ಏಕತೆ ಸ್ವಾತಂತ್ರ್ಯದ ಜಾಗೃತಿ, ಕನ್ನಡಿಗರು ತಮ್ಮನ್ನು ಮರೆತಿದ್ದ ಸಂದರ್ಭದಲ್ಲಿ ತಮ್ಮನ್ನು ಜಾಗೃತಗೊಳಿಸುವ ಅಂಶವನ್ನು ಈ ಕಾದಂಬರಿ ಕಟ್ಟಿಕೊಡುತ್ತದೆ. ಇದೇ ರೀತಿಯಾಗಿ ಒಂದು ರಾಷ್ಟ್ರದ ನಿರ್ಮಾಣ ಕಾರ್ಯ ಒಂದು ವರ್ಗದಿಂದ ಸಾಧ್ಯವಿಲ್ಲ ಎಲ್ಲ ವರ್ಗ ಮತ್ತು ಜಾತಿಗಳು ಒಗ್ಗೂಡಿದಾಗ ಮಾತ್ರ ಸಾಧ್ಯ ಪರತಂತ್ರದಿಂದ ವಿಮೋಚನೆಗೊಳ್ಳಲು ನಾವೆಲ್ಲರೂ ಒಂದಾಗಬೇಕು ಎಂಬ ಸಂದೇಶವನ್ನು ನೀಡುತ್ತದೆ. ಏನೇ ಇದ್ದರೂ ಕೂಡ ಕರ್ನಾಟಕ ಏಕೀಕರಣ ಮತ್ತು ದೇಶದ ಸ್ವಾತಂತ್ರ್ಯ ಹೋರಾಟದ ಸಂದರ್ಭದಲ್ಲಿ ರಚನೆಯಾದ ಈ ಕಾದಂಬರಿ ವಿಜಯನಗರ ಸಾಮ್ರಾಜ್ಯದ ಚರಿತ್ರೆಯನ್ನು ಕನ್ನಡ ನಾಡು ಮತ್ತು ರಾಷ್ಟ್ರವನ್ನು ಕಟ್ಟಲು ಜನರ ಜಾಗೃತಿಗಾಗಿ ಬಳಸಿಕೊಂಡಿದ್ದಾರೆ.

**ಕನ್ನಡಿಗರ ಕರ್ಮ ಕಥೆ 1916:** ಮೆಹರಜಾನಳ ಪ್ರೇಮ (ರಾಮರಾಯನೊಂದಿಗೆ ಆಸ್ತಿ ಮತ್ತು ಸಾಮ್ರಾಜ್ಯಕ್ಕಾಗಿ ಕೃಷ್ಣದೇವರಾಯನ ಮಗಳನ್ನು ಮದುವೆ ಆದ ಇದೇ ಸೇಡಿಗಾಗಿ ಮುಸ್ಲಿಮರು ಒಂದಾಗಿದ್ದು, ರಾಮರಾಯನ ವಿರುದ್ಧ 1565 ರಕ್ಕಸ ತಂಗಡಗಿ ಯುದ್ಧದಲ್ಲಿ ಸೇಡನ್ನು ತೀರಿಸಿಕೊಳ್ಳಲು ಕಾರಣವಾಯಿತು ಎಂದು ಮರಾಠಿ ಕವಿ ಹರಿ ನಾರಾಯಣ ಆಪ್ಟೆ ಅವರ ವಜ್ರಾಗಾಥ ಕಾದಂಬರಿಯಿಂದ ತಿಳಿಯುತ್ತದೆ. ಆ ಸಂದರ್ಭದಲ್ಲಿ ಮೆಹರ್ ಜಾನಳು ಗರ್ಭಿಣಿಯಾಗಿದ್ದು, ಮುಂದೆ ಅವಳಿಗೆ ಹುಟ್ಟುವ ಮಗನೇ ರಣಮಸ್ತಖಾನ್. ಈ

ರಣಮಸ್ತಖಾನ್‌ನು ಅಹ್ಮದ್ ನಗರದ ರಾಜಕುಮಾರಿ ನೂರ್ ಜಹನಳನ್ನು ಪಡೆಯಲಿಕ್ಕಾಗಿ ರಕ್ಕಸ ತಂಗಡಗಿ ಯುದ್ಧದಲ್ಲಿ ರಾಮರಾಯನ ತಲೆಯನ್ನು ಕಡಿಯುತ್ತಾನೆ. ಮುಂದೆ ತನ್ನ ತಂದೆಯನ್ನೇ ಕಡಿದಿದ್ದು ತಾಯಿಯಿಂದ ಗೊತ್ತಾದಾಗ, ತಾಯಿ ಮಗ ಇಬ್ಬರೂ ಆತ್ಮಹತ್ಯೆಯನ್ನು ಮಾಡಿಕೊಳ್ಳುತ್ತಾರೆ. ಈ ರೀತಿಯ ಅನೇಕ ವಿಚಾರಗಳು ಈ ಸಾಹಿತಿಗಳ ಚಿಂತನೆಗಳಲ್ಲಿ ಹುದುಗಿವೆ.

**ಶ್ರೀನಾಗೇಶ ಹೆಗಡೆ:**

**ಎಚ್ಚಮನಾಯಕ-1936:** ಈ ಕಾದಂಬರಿಯು ವಿಜಯನಗರ ಸಾಮ್ರಾಜ್ಯ ಸ್ಥಾಪನೆಯಾಗಿ 600 ವರ್ಷಗಳ ನಂತರ ಜರುಗಿದ 1936 ರಲ್ಲಿ ನಡೆದ ಮೊದಲ ಜಯಂತ್ಯೋತ್ಸವದ ಸಂದರ್ಭದಲ್ಲಿ ಲೋಕಾರ್ಪಣೆಗೊಂಡಿತು. ಈ ಸಂದರ್ಭದಲ್ಲಿ ಭಾರತದಲ್ಲಿ ಬ್ರಿಟಿಷರ ವಿರುದ್ಧದ ಸ್ವಾತಂತ್ರ್ಯದ ಹೋರಾಟ ಏರುಗತಿಯಲ್ಲಿತ್ತು. ಮತ್ತು ಭಾರತದ ವಿವಿಧ ಪ್ರಾಂತ್ಯಗಳಲ್ಲಿ ಭಾಷೆಯ ಆಧಾರದ ಮೇಲೆ ಏಕೀಕರಣದ ಹೋರಾಟಗಳು ತೀವ್ರ ಸ್ವರೂಪವನ್ನು ಪಡೆದುಕೊಂಡಿದ್ದವು. ಈ ನಾಟಕವು ಕ್ರಿ.ಶ. 1565 ರಲ್ಲಿ ನಡೆದ ರಕ್ಕಸ-ತಂಗಡಗಿ ಕದನದಲ್ಲಿ ಸಾಮ್ರಾಜ್ಯ ಸೋತು ವಿಜಯನಗರ ಸಾಮ್ರಾಜ್ಯ ಮತ್ತು ಪರಿವಾರದವರು ಪೆನುಗೊಂಡಕ್ಕೆ ಬಂದರು. ವೆಂಕಟಪತಿಯ ಮರಣದ ನಂತರ ಸಿಂಹಾಸನಕ್ಕೆ ಧಕ್ಕೆ ಬಂದಾಗ ಸಾಮ್ರಾಜ್ಯನಿಷ್ಠನಾದ ಎಚ್ಚಮನಾಯಕನು ಹೇಗೆ ಅರಸು ಮನೆತನದ ಕುಡಿಯನ್ನು ರಕ್ಷಿಸಿ ಪಟ್ಟಕ್ಕೆ ಕಟ್ಟುತ್ತಾನೆ ಎಂಬುದನ್ನು ಚಿತ್ರಿಸಿದ್ದಾರೆ. ಈ ನಾಟಕ ರಚಿಸಲು ಪಿ.ಬಿ.ದೇಸಾಯಿಯವರ "ವಿಜಯನಗರ ಸಾಮ್ರಾಜ್ಯ" ಕೃತಿ ಪ್ರೇರಣೆಯಾಗಿದ್ದು ಕನ್ನಡಿಗರ ನಿಷ್ಠೆಯನ್ನು ಎತ್ತಿತೋರಿಸುತ್ತದೆ. 1936 ರಲ್ಲಿ ನಡೆದ ವಿಜಯನಗರ ಸಾಮ್ರಾಜ್ಯದ ಸ್ಥಾಪನೆಯ ಮೊದಲ ಜಯಂತ್ಯೋತ್ಸವದ ಸಂದರ್ಭದಲ್ಲಿ ಹೊರಬಂದ ಈ ನಾಟಕ ಕನ್ನಡದ ಏಕೀಕರಣ ಹೋರಾಟದ ಏರುಗತಿಯ ಕಾಲದಲ್ಲಿ ಇನ್ನಷ್ಟು ಉರುಪು ಮತ್ತು ಉತ್ಸಾಹಗಳನ್ನು ಏಕೀಕರಣದ ಹೋರಾಟಗಾರರಿಗೆ ಸ್ಫೂರ್ತಿಯಾಗಿ ನೀಡಿತು.

**ಕುವೆಂಪು:**

**ಹಂಪೆಯ ಭೀಮ:** ನವೋದಯ ಕವಿಯಾದ ಕುವೆಂಪುರವರು ತಮ್ಮ ಹಂಪೆಯ ಭೀಮ ಎಂಬ ಕವನದಲ್ಲಿ ಮುಸ್ಲಿಮರ ದಾಳಿಯಿಂದ ಹಾಳುಕೊಂಪೆಯಾಗಿರುವ ಹಂಪಿಯನ್ನು ಉದ್ಧರಿಸುವುದನ್ನು ಬಿಟ್ಟು ದ್ವಾರಬಾಗಿಲಿನಲ್ಲಿ ನಿಂತು ಏನು ಮಾಡುತ್ತಿರುವೆ, ಭೀಮ ಬಾ ಮತ್ತೆ ಕನ್ನಡಿಗರ ಭವ್ಯವಾದ ಸಂಸ್ಕೃತಿಯನ್ನು ಕಟ್ಟಲು ಹೋರಾಡು ಎಂದು ತಮ್ಮ ಕವನದ ಮೂಲಕ ಕರೆ ನೀಡುತ್ತಾರೆ.

**ದ.ರಾ.ಬೇಂದ್ರೆ:**

**ಹಂಪಿ ವಿಜಯನಗರ ದರ್ಶನ:** ಈ ಕವನದಲ್ಲಿ ಬೇಂದ್ರೆಯವರು ಒಂದು ಕಾಲಕ್ಕೆ ಭವ್ಯವಾಗಿ ಮೆರೆದುಹೋದ ಸಾಮ್ರಾಜ್ಯ ಕುರಿತು, ಆ ಸಾಮ್ರಾಜ್ಯ ಕನ್ನಡದ ನಡುಮನೆ ಇದ್ದಂತೆ, ಅದು ಹಾಳು ಹಂಪೆಯಾಗಿದ್ದರೂ ಕನ್ನಡವನ್ನು ಕಟ್ಟಲು ಹೊರಟವರಿಗೆ ಅದು ಪ್ರೇರಕ ಶಕ್ತಿ. ಆ ಸಾಮ್ರಾಜ್ಯದ ಸ್ಫೂರ್ತಿಯಿಂದ ನಾವು ಹೊಸನಾಡನ್ನು ಕಟ್ಟಬೇಕಾಗಿದೆ. ಕನ್ನಡ ಎಷ್ಟೇ ಹರಿದು ಹಂಚಿ ಹೋಗಿದ್ದರೂ ಆ ಪ್ರದೇಶಗಳನ್ನು ಮತ್ತೆ ನಡುಮನೆಗೆ ತಂದು ಸೇರಿಸಬೇಕಾಗಿದೆ ಎಲ್ಲರೂ ಒಂದಾಗಿ ನಮಗೆ ಭವ್ಯವಾಗಿ ಆಳಿದ ವಿಜಯನಗರ ಪ್ರೇರಣೆಯಾಗಿದೆ ಎಂದು ಕರೆ ಕೊಟ್ಟರು.

**ವಿನಾಯಕ ಕೃಷ್ಣ ಗೋಕಾಕ್:**

ಕವಿ ತಮ್ಮ ಕವನಗಳಲ್ಲಿ ವಿಜಯನಗರ ಸಾಮ್ರಾಜ್ಯ ಸರ್ವಧರ್ಮಗಳ ನೆಲೆವೀಡಾಗಿತ್ತು. ಆದರೂ ಅನ್ಯರ ದಾಳಿಗೆ ಒಳಗಾಗಿ ಅವನತಿ ಹೊಂದಿದ್ದು, ಕನ್ನಡಿಗರ ಹೃದಯದಲ್ಲಿ ಜ್ಯೋತಿಯಂತೆ ಪ್ರಜ್ವಲಿಸುತ್ತದೆ. ಮತ್ತೆ ಆ ವೈಭವಯುತ ಸಾಮ್ರಾಜ್ಯವನ್ನು ಕಟ್ಟುವ ಕೆಚ್ಚನ್ನು ಕನ್ನಡಿಗರು ಕಾಪಾಡಿಕೊಳ್ಳಬೇಕಾಗಿದೆ. ನಾವು ಕನ್ನಡವನ್ನು ಕಟ್ಟಲು ಸದಾ ಸಿದ್ಧರಾಗೋಣ ಎಂದು ಕರೆ ನೀಡುತ್ತಾರೆ.

**ಶಂಕರ ಅಣ್ಣಾಜಿ ಕುಲಕರ್ಣಿ:**

**ಕರ್ನಾಟಕ ಸಿಂಹಾಸನ ಸ್ಥಾಪನೆ:** 1937 ರಲ್ಲಿ ರಚನೆಯಾದ ಈ ಕಾದಂಬರಿಯಲ್ಲಿ ಕವಿ ವಿಜಯನಗರ ಸಾಮ್ರಾಜ್ಯದ ಹಿರಿಮೆಯನ್ನು ಕುರಿತು ಬರೆದಿದ್ದಾರೆ. ಈ ಕಾದಂಬರಿ ರಚನೆಗೊಂಡಿರುವ ಮುಖ್ಯ ಉದ್ದೇಶವು 20ನೇ ಶತಮಾನದ ಆದಿಭಾಗದಲ್ಲಿನ ವಸಾಹತುಶಾಹಿ ಆಡಳಿತದಿಂದ ಉಂಟಾದ ಪರಿಣಾಮಗಳ ವಿರುದ್ಧವಾಗಿ ಕನ್ನಡಿಗರಲ್ಲಿ ಜಾಗೃತಿಯನ್ನು ಉಂಟು ಮಾಡುವುದು. 14ನೇ ಶತಮಾನದಲ್ಲಿ ಉದಯವಾದ ವಿಜಯನಗರ ಸಾಮ್ರಾಜ್ಯದ ವೈಭವ ಮತ್ತು ಚಾರಿತ್ರಿಕ ನೆನಪುಗಳ ಮೂಲಕ ಕನ್ನಡಿಗರು ತಮ್ಮ ಅಸ್ಮಿತೆಯನ್ನು ಕಟ್ಟಿಕೊಳ್ಳಲು ಈ ಕಾದಂಬರಿ ಪ್ರೇರೇಪಿಸುತ್ತದೆ.

**ಆನಂದಕಂದ:**

**ರಾಜಯೋಗಿ (1934) ಮತ್ತು ಅಶಾಂತಿಪರ್ವ:** ಈ ಎಂಬ ಎರಡು ಕಾದಂಬರಿಗಳ ಮೂಲಕ ವಿಜಯನಗರ ಸಾಮ್ರಾಜ್ಯವನ್ನು ಕನ್ನಡಿಗರ ಸಾಮ್ರಾಜ್ಯವೆಂದು ಹಾಡಿ ಹೊಗಳಿದ್ದಾರೆ. ಈ ಸಾಮ್ರಾಜ್ಯದ ಸಂಸ್ಕೃತಿ, ಶಿಲ್ಪಕಲೆ, ಭವ್ಯವಾದ ಸಾಮ್ರಾಜ್ಯವನ್ನು ಕುರಿತು ವಿದೇಶಿ ಪ್ರವಾಸಿಗರು ಮಾಡಿದ ವರದಿಗಳನ್ನು ಉಲ್ಲೇಖಿಸುತ್ತಾ ಕನ್ನಡ ನಾಡನ್ನು ಕಟ್ಟಲು ಕನ್ನಡಿಗರು ಒಂದಾಗಬೇಕು ಎಂದು ಕರೆನೀಡುತ್ತಾರೆ.

**ರಂ. ಶ್ರೀ ಮುಗಳಿ:**

**ವಿಜಯನಗರ ಸಾಮ್ರಾಜ್ಯ 1936:** 1936ರಲ್ಲಿ ನಡೆದ ಮೊದಲ ವಿಜಯನಗರದ ಸ್ವರ್ಣೋತ್ಸವ ಸಂಚಿಕೆಯಲ್ಲಿ ಮತ್ತು ಅರುಣೋದಯ ಪತ್ರಿಕೆಯಲ್ಲಿ ಈ ಒಂದು ವಿಜಯನಗರ ಸಾಮ್ರಾಜ್ಯವನ್ನು ಕುರಿತು ನಾಟಕವನ್ನು ರಚಿಸಿದ್ದಾರೆ. ಈ ನಾಟಕದ ಮೂಲಕ 1946 ರ ವರೆಗೆ ವಿಜಯನಗರ ಸಾಮ್ರಾಜ್ಯದ ಸ್ಥಾಪನೆ ಮತ್ತು ಅದರ ವೈಭವ ಮತ್ತು ಕನ್ನಡ ನಾಡಿನ ಇತಿಹಾಸದಲ್ಲಿ ಅತ್ಯಂತ ಉಜ್ವಲವಾದ ಒಂದು ಕಾಲವನ್ನು ಆ ಸಾಮ್ರಾಜ್ಯ ಹೊಂದಿತ್ತು ಎಂಬುದರ ಮೂಲಕ ನಾವೆಲ್ಲರೂ ಒಂದಾಗಿ ಭಾವನಾತ್ಮಕವಾಗಿ ಬೆಸೆದುಕೊಂಡು ಈ ಕನ್ನಡ ನಾಡನ್ನು ಕಟ್ಟಲು ಪ್ರೇರಣೆ ಹೊಂದಬೇಕು ಎಂದು ಕರೆ ನೀಡುತ್ತಾರೆ.

**ಸಮಾರೋಪ:**

20ನೇ ಶತಮಾನದ ಆದಿ ಭಾಗದಿಂದ ಕನ್ನಡ ನಾಡು, ನುಡಿಯನ್ನು ಬೆಳೆಸುವ ಉದ್ದೇಶದಿಂದ ಅನೇಕ ಕನ್ನಡದ ಕವಿಗಳು ಕನ್ನಡಿಗರನ್ನು ಜಾಗೃತಿಗೊಳಿಸಲು ವಿಜಯನಗರ ಸಾಮ್ರಾಜ್ಯವನ್ನು ಕೇಂದ್ರವಾಗಿಟ್ಟುಕೊಂಡು ಹಲವು ಕೃತಿ, ಕವನ, ನಾಟಕ, ಮತ್ತು ಕಾದಂಬರಿಗಳನ್ನು ರಚಿಸಿ ಕನ್ನಡದ ಏಕೀಕರಣದ ಸಂದರ್ಭದಲ್ಲಿ ಕನ್ನಡಿಗರಲ್ಲಿ ಐತಿಹಾಸಿಕ ನೆನಪುಗಳ ಮೂಲಕ ಹೋರಾಡಲು ಹೊಸ ಉರುಪು ತುಂಬಿದರು. ಕೊರಟ ಶ್ರೀನಿವಾಸ ರಾವ್ ಮತ್ತು ಆಲೂರು ವೆಂಕಟರಾಯರು, ಆನಂದಕಂದರು, ಆರ್.ಟಿ.ಕರ್ಪೂರಕರ್, ಡಿ.ವಿ. ಜಿ, ಮೊದಲಾದ ಕನ್ನಡ ಸಾಹಿತಿಗಳು ವಿಜಯನಗರ ಸಾಮ್ರಾಜ್ಯದ ವೈಭವವನ್ನು ಹಾಡಿ

ಬರೆದಿದ್ದಾರೆ. ಅದರ ಜೊತೆಗೆ ಅವನತಿಯನ್ನು ಕೇವಲ ಧಾರ್ಮಿಕ ಹಿನ್ನೆಲೆಯಿಂದ ನೋಡದೆ ವಿವಿಧ ಆಯಾಮಗಳನ್ನು ಎತ್ತಿಹಿಡಿದು ರಾಷ್ಟ್ರದ ಮತ್ತು ನಾಡಿನ ಏಕತೆಗಾಗಿ ಎಲ್ಲರೂ ಒಂದಾಗಲು ಕರೆನೀಡಿದ್ದಾರೆ.

**ಪರಾಮರ್ಶನ ಗ್ರಂಥಗಳು:**


1. ಗರುಡ ಸದಾಶಿವರಾಯ., (1929), ಎಚ್ಚಮನಾಯಕ, ಮಲ್ಲಪ್ಪ ವಿರೂಪಾಕ್ಷಪ್ಪ ಅರಳಿ, ಗದಗ.
2. ಶ್ರೀನಾಗೇಶ., (1936), ಎಚ್ಚಮ್ಮ ನಾಯಕ, ಆನಂದವನ, ಅಗಡಿ
3. ಗಳಗನಾಥ., (1913), ಕುಮುದಿನಿ (ಗಳಗನಾಥರ ಕಾದಂಬರಿಗಳು ಸಂ–1) ಪ್ರಸಾರಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.
4. ಗಳಗನಾಥ., (1999), ಮಾಧವ ಕರುಣಾ ವಿಲಾಸ (ಗಳಗನಾಥರ ಕಾದಂಬರಿಗಳು ಸಂ–1) ಪ್ರಸಾರಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.
5. ಗಳಗನಾಥ., (1999), ಕನ್ನಡಿಗರ ಕರ್ಮಕಥೆ, (ಗಳಗನಾಥರ ಕಾದಂಬರಿಗಳು ಸಂ–2) ಪ್ರಸಾರಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.
6. ಆಲೂರು ವೆಂಕಟರಾಯ., (2009), ಕರ್ನಾಟಕತ್ವದ ವಿಕಾಸ ಕನ್ನಡ ಸಾಹಿತ್ಯ ಪರಿಷತ್ ಬೆಂಗಳೂರು.
7. ಆನಂದಕಂದ., (1934), ರಾಜಯೋಗಿ, ಮನೋಹರ ಗ್ರಂಥಮಾಲಾ, ಧಾರವಾಡ.
8. ರಂ.ಶ್ರೀ. ಮುಗಳಿ., (1948), ವಿಜಯ ಸಾಮ್ರಾಜ್ಯ, ವಿಜಯ ಗ್ರಂಥಮಾಲೆ, ಬೆಳಗಾವಿ.
9. ಕುವೆಂಪು, ಹಂಪೆಯ ಭೀಮ., (2000), ಶಿವಾರೆಡ್ಡಿ ಕೆ.ಸಿ.(ಸಂ) ಕುವೆಂಪು ಸಮಗ್ರ ಕಾವ್ಯ ಸಂ–1, ಪ್ರಸಾರಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ.



**Funding:**

This study was not funded by any grant.

**Conflict of interest:**

The Authors have no conflict of interest to declare that they are relevant to the content of this article.



**About the License:**

© The Authors 2024. The text of this article is open access and licensed under a Creative Commons Attribution 4.0 International License.